ಕಥೆ

# ನಾನು ಅಲ್ಲಿಗೆ ಹೋಗಲೇಬಾರದಾಗಿತ್ತು




## ಎಂ. ಅಬ್ದುಲ್ ರೆಹಮಾನ್ ಪಾಷ

ಕಲೆ: ಮುರಳೀಧರ್ ರಾಥೋಡ್


ನಾನು ಅಲ್ಲಿಗೆ ಹೋಗಲೇಬಾರದಾಗಿತ್ತು 'ನಾನು ಅಲ್ಲಿಗೆ ಹೋಗಲೇ ಬಾರದಾಗಿತ್ತು...' ಶಿವು ಹೀಗೆ ಅದೆಷ್ಟು ಬಾರಿ ಹೇಳಿಕೊಂಡಿದ್ದನೋ ಅವನಿಗೆ ಲೆಕ್ಕತಪ್ಪಿ ಹೋಗಿತ್ತು. ಹೋಗು ಅಂತ ಅವನಿಗೆ ಯಾರು ಹೇಳಿದ್ದರು? ತಾನೇ ಹೋದ. 'ಪಾಠ ಮಾಡುವುದನ್ನು ಬಿಟ್ಟು ಮೇಷ್ಟ್ರು ಓಡಿ ಹೋಗಿದ್ರಲ್ಲ, ಇಡೀ ಶಾಲೆ ಹೋಗಿತ್ತು, ನಾನೇನು ಡೆಸ್ಕ್ ಮೇಲೆ ಒಬ್ಬನೇ ನೊಣ ಹೊಡಿತಾ ಕೂತ್ಕೋಬೇಕಾಗಿತ್ತಾ' ಅಂತ ಸಮಾಧಾನಾನೂ ಮಾಡಿಕೊಂಡಿದ್ದ.

'ಶಿವ್ರೂ... ಲೇ ಶಿವ್ಯಾ' ಅಪ್ಪನ ಆತಂಕ, ದುಃಖಭರಿತ ಧ್ವನಿ ಮಧ್ಯರಾತ್ರಿಯ ನೀರವತೆಯನ್ನು ಸೀಳಿ ಕಿವಿಯನ್ನು ಹೊಕ್ಕಿತ್ತು. ಅವನಪ್ಪನ ಉರಿಗಣ್ಣುಗಳನ್ನು ನೆನಪಿಸಿಕೊಂಡು ಚಳಿಯಲ್ಲಿಯೂ ಶಿವು ಬೆವರಿದ. ಹಿಂದೊಂದು ಸಲ ಇಂಥದೇ ತಪ್ಪು ಮಾಡಿದ್ದಾಗ ಅವರಪ್ಪ ನಿಂಗಪ್ಪ, ಅವನನ್ನು ಚೆನ್ನಾಗಿ ಹೊಡೆದು, ತಲೆ ಕೆಳಗಾಗಿ ತೂಗು ಹಾಕಿ, ಕೆಳಗಡೆ ಕೆಂಪುಮೆಣಸಿನ ಕಾಯಿಯ ಹೊಗೆ ಹಾಕಿದ್ದ ಅಥವಾ ಹಾಗೆ ಮಾಡುತ್ತೇನೆ ಎಂದು ಬೆದರಿಸಿದ್ದ. ತಾಯಿ ಇಲ್ಲದ ಒಬ್ಬನೇ ಮಗ ಹಾಳಾದಾನು ಎಂಬ ಅತಿಯಾದ ಕಾಳಜಿಯಿಂದಾಗಿ ನಿಂಗಪ್ಪ ಒಮ್ಮೊಮ್ಮೆ ಹೀಗೆ ಶಿವು ಜೊತೆ ತುಸು ಕಠಿಣವಾಗಿಯೇ ನಡೆದುಕೊಳ್ಳುತ್ತಿದ್ದ.

ಆ ಹೆದರಿಕೆಗೆ, ಇವತ್ತು ಶಿವು ರಾತ್ರಿಯಾದರೂ ಮನೆಗೆ ಹಿಂದಿರುಗದೇ ಶಾಲೆಯ ಹಿಂಬದಿಯಲ್ಲಿದ್ದ ಮಾವಿನ ತೋಪಿನಲ್ಲಿ ಒಂದು ದೊಡ್ಡ ಬಂಡೆಗೆ ಬೆನ್ನು ಕೊಟ್ಟು ಅವಿತು ಕುಳಿತಿದ್ದ. ಶರ್ಟೂ ಇಲ್ಲದ್ದಕ್ಕಾಗಿ ರಾತ್ರಿ ಕಳೆದಂತೆ ಚಳಿಯೂ ಹೆಚ್ಚು ಕ್ರೂರವಾಗಿತ್ತು. ಅಪ್ಪನ ಧ್ವನಿ ಒಮ್ಮೆ ಹತ್ತಿರ ಸುಳಿದಂತಾಗಿ ಮತ್ತೆ ಕ್ರಮೇಣ ದೂರವಾಗಿ ಕತ್ತಲಲ್ಲಿ ಕರಗಿಹೋಯಿತು.

'ನಾನು ಅಲ್ಲಿಗೆ ಹೋಗಲೇ ಬಾರದಾಗಿತ್ತು' ಇನ್ನೊಮ್ಮೆ ಪಶ್ಚಾತ್ತಾಪ ಪಟ್ಟ ಶಿವು.